# ಮದುವೆಯೆಲ್ಲಾ ಸ್ವರ್ಗದಲ್ಲೇ ನಡೆಯುತ್ತವೆ



**ಉಮಾ ಮತ್ತಿಘಟ್ಟ**

ಕಲೆ: ಕುಮಾರ್ ಕಾಟೇನಹಳ್ಳಿ

ಗಂಗಕ್ಕ ಸೀರೆ ನೆರಿಗೆಯನ್ನು ಸ್ವಲ್ಪ ಎತ್ತಿ ಹಿಡಿದು ಬರ ಬರ ನಡೆಯುತ್ತಿದ್ದಳು. ಕೈಯಲ್ಲೊಂದು ಸಣ್ಣ ಸಂಚಿ. ಅದರಲ್ಲಿ ಒಂದು ಸೀರೆ, ಪಲಕ, ಲಂಗ ಒಂದು ಅಂಗವಸ್ತ್ರ ಪಂಜೆ(ಸ್ನಾನಕ್ಕೆ ಬಳಸುವ ಪಂಜೆ)ಮುಂತಾದವುಗಳು ಅಷ್ಟೆ. ಊರಿನ ಯಾವ ತುದಿಗೆ ಹೋದರೂ ಅಷ್ಟೇ ಅವಳ ಆಸ್ತಿ. ಶಿವರಾಮ ಹೆಗಡೆಯ ಮನೆಯ ಅಂಗಳದ ಮೆಟ್ಟಿಲು ಏರುತ್ತಿದ್ದಂತೆ 'ಗಂಗಕ್ಕೊ', 'ಗಂಗ', ಗಂಗತ್ತೆ ಎಂದು ಹಿರಿಯರಿಂದ ಮಕ್ಕಳವರೆಗೂ ಮಾತಾಡಿಸುವವರೆ. 'ಗಂಗಾ ನಿಂಗೆ ಆಸ್ರಿಯಂತ ಅಡ್ಡಿಲ್ಲೆ.' ಶಿವರಾಮನ ಹೆಂಡತಿ ಪದ್ಮಾವತಿ ಸೆರಗಿನಿಂದ ಕೈ ಒರೆಸುತ್ತಾ ಮಾತಾಡಿಸಿದಳು. 'ಯಂತ ಬೇಡ' ಎಂದು ಜಗುಲಿಯಲ್ಲಿ ಹಾಸಿದ ಕಂಬಳಿಯ ತುದಿಯಲ್ಲಿ ಕುಳಿತುಕೊಂಡಳು. ಕುಳಿತುಕೊಳ್ಳುವಾಗ ಕಾಲಿನ ಮೀನಖಂಡದ ಮೇಲಿನ ಕನ್ನೆತ್ತರಗೊಂಡ ಭಾಗ ಒತ್ತಿದಂತಾಗಿ ನೋವಾಯಿತು. ಆದರೂ ನಗೆಯಾಡುತ್ತಾ 'ಬರಲು ತಡ ಆತು, ತೊಂದ್ರಿಲ್ಲೆ ನಾ ಬಂದ ಮೇಲೆ ನಿಮಗೆ ಚಿಂತೆ ಬೇಡ' ಎಂದು ದೃಢವಾಗಿ ಹೇಳಿದಳು.

ಶಿವರಾಮ ಹೆಗಡೆಯ ಎರಡನೆಯ ಮಗ ನಾರಾಯಣನ ಮದುವೆ. ಇಲ್ಲಿಗೇ ಹೆಣ್ಣು ತಂದು ಧಾರೆ ಎರೆದು ಕೊಡುತ್ತಾರಂತೆ. ಹಾಗಾಗಿ ತಿಂಗಳ ಮೊದಲೇ ಶಿವರಾಮನ ಹೆಂಡತಿ ಪದ್ಮಾವತಿ ಗಂಗೆಯ ಮನೆಗೆ ಬಂದು, 'ನಾಂದಿ ದಿನದ ಮಧ್ಯಾಹ್ನ ಸಂಜೆಯೆಲ್ಲಾ ನಿಂದೆ ಅಡಗೆ, ಕಡೆಗೆ ಕೈ ಕೆಲಸಕ್ಕೆ ನೀನೆ ಬಂದು ಎರಡು ದಿನ ನಡೆಸಿ ಕೊಡವ್ವು.' ಎಂದಾಗ ಗಂಗೆಯ ಸಂತೋಷಕ್ಕೆ ಪಾರವೇ ಇಲ್ಲ. ಗಂಗೆಯ ಗಂಡ ಕವಳ ಹಾಕುತ್ತಿದ್ದವನು ಕವಳ ಸಂಚಿಯನ್ನು ಮಡಿಚುತ್ತಾ 'ಅಡ್ಡಿಲ್ಯಪಾ ನಿಂಗ ಕರ್ಯೂದ ಹೆಚ್ಚೋ, ಅದು ಬಪ್ಪೂದ ಹೆಚ್ಚೋ ನಾ ಮುದ್ದಾಮ ಕಳಸ್ತೆ' ಎಂದ. 'ಹಾಂ ಎಲ್ಲವ್ವು ಮುದ್ದಾಂ ಬನ್ನಿ.ಇದು ಆಪಸ್ನಾತೆ ಕರಯ. ಕಡೆಗೆ ಅಕ್ಷತ ಕೊಟ್ಟು ಕರಯೂಲೆ ಯಾರಾರು ಬತ್ತೋ.' ಎಂದಳು ಪದ್ಮಾವತಿ. 'ಇವೇಯೊ ಕಳಸ್ಕೊಡವ್ವು. ಹೇಳಬುಟೋ. ಇದ್ಕೆಯೆಂತ ಕಮ್ಮಿಇಲ್ಲೆ' ಎಂದಳು ಗಂಗೆ. 'ಇರಲಿ ಬಿಡೆ ಗಂಗೆ. ನಿಂಗೊ ತರ್ಕಳಡಿ, ಯಲ್ಲಾರು ಬನ್ನಿ'. ಎಂದಳು. ಇಡೀ ಊರಿಗೇ ಗೊತ್ತು ಗಂಗೆಯ ಗಂಡ ದೇವರು ಯಂತವನು ಎಂದು.

ಗಂಗೆಯ ಗಂಡ ದೇವರು ಭಟ್ಟ. ಹೆಸರಷ್ಟೇ ದೇವರು.